ಟಿಪ್ಪಣಿ ಹಾಳೆ

ವಿಷಯ Improvements to Cross roads from Chikkadinne to Tirumala nagara · ಪುಟದ ಸಂಖ್ಯೆ (1)

ಕಡತದ ಸಂಖ್ಯೆ ATE/yn:/426/19-20

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ: Improvements to Cross roads from Chikkadinne to Tirumalanagara in ward no:03.

******

1) ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಟ್ಟೂರು, ವಾರ್ಡ್ ನಂ-03 ರ ವ್ಯಾಪ್ತಿಯಲ್ಲಿನ **ಚಿಕ್ಕದಿನ್ನೆಯಿಂದ ತಿರುಮಲನಗರದ ವರೆಗೆ ಅಡ್ಡರಸ್ತೆಗಳು** ಹಾಳಾಗಿದ್ದು, ಸದರಿ ರಸ್ತೆಗಳನ್ನು ಅಭಿವೃದ್ದಿಪಡಿಸಿಕೊಡುವಂತೆ ಸಾರ್ವಜನಿಕರು ಯಲಹಂಕ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಮತ್ತು ಬಿ.ಬಿ.ಎಂ.ಪಿ ಸದಸ್ಯರುಗಳಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಆದುದರಿಂದ ಯಲಹಂಕ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಮತ್ತು ಬಿ.ಬಿ.ಎಂ.ಪಿ ಸದಸ್ಯರು ಸದರಿ ಕಾಮಗಾರಿಯನ್ನು **2019-20ನೇ ಸಾಲಿನ POW Works** ಅನುದಾನದಡಿಯಲ್ಲಿ ಸೇರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ತಿಳಿಸಿರುತ್ತಾರೆ.

ಅದರಂತೆ, ಸ್ಥಳ ಪರಿವೀಕ್ಷಣೆ ಮಾಡಿ ಈ ಮೇಲ್ಕಂಡ ಕಾಮಗಾರಿಯನ್ನು 2019-20ನೇ ಸಾಲಿನ **POW Works** ಅನುದಾನದಡಿಯಲ್ಲಿ ರೂ.30.00ಲಕ್ಷಗಳಿಗೆ ಹಾಗೂ ಅಂದಾಜು ಪಟ್ಟಿಯನ್ನು PW, P&IWTD S.R.Bangalore Circle for the year 2018-19 ದರಪಟ್ಟಿಯಂತೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಸದರಿ ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿರುತ್ತದೆ.

1) ಚರಂಡಿಗಳ ಕಲ್ಲಿನ ಚಪ್ಪಡಿಗಳನ್ನು ತೆಗೆಯುವುದು ಮತ್ತು ಪುನರ್ ಜೋಡಿಸುವುದು.
2) ಸಾಮಾನ್ಯ ಮಣ್ಣಿನ ಅಗೆತ ಮತ್ತು ತೆಗೆದ ಮಣ್ಣನ್ನು ದೂರದ ಸ್ಥಳಕ್ಕೆ ಸಾಗಿಸುವುದು.
3) ಸಿ.ಸಿ.1:3:6 ನ್ನು ಅಳವಡಿಸುವುದು.
2) 4) ಸಿಮೆಂಟ್ ಕಾಂಕ್ರೀಟ್ ಎಂ20 ಯನ್ನು ಅಳವಡಿಸುವುದು.
5) ಟಿ.ಎಂ.ಟಿ ಸ್ಟೀಲ್‌ನ್ನು ಹಾಕುವುದು.
6) ಗ್ರಾನೈಟ್ ಸ್ಲಾಬ್‌ನ್ನು ಹಾಕುವುದು.
7) ಪ್ರೈಮರ್ ಕೋಟ್‌ನ್ನು ಹಾಕುವುದು.
8) ಬಿಟುಮಿನಸ್ ಮೆಕಾಡಮ್‌ನ್ನು ಅಳವಡಿಸುವುದು.
9) ಟ್ಯಾಕ್‌ಕೋಟ್‌ನ್ನು ಹಾಕುವುದು.
10) 40 ಎಂ.ಎಂ.ದಪ್ಪದ ಬಿಟುಮಿನಸ್ ಕಾಂಕ್ರೀಟ್‌ನ್ನು ಹಾಕುವುದು
11) Road marking with Hot applied Thermoplastic compound

ಮೇಲ್ಕಂಡ ಎಲ್ಲಾ ಅಂಶಗಳು ಸದರಿ ಕಾಮಗಾರಿಗೆ ಬಹಳ ಅವಶ್ಯಕವಾಗಿರುತ್ತದೆ. ಈ ಕಾಮಗಾರಿಗೆ **2019-20ನೇ ಸಾಲಿನ POW Works** ಅನುದಾನದಡಿಯಲ್ಲಿ ಕಾಮಗಾರಿಯ ಸಂಕೇತ 003-30-0003355 ಕೆಲಸವನ್ನು ತುರ್ತಾಗಿ ತೆಗೆದುಕೊಳ್ಳಬೇಕಾಗಿರುವುದರಿಂದ ಹಾಗೂ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಆಡಳಿತಾತ್ಮಕ 3) ಹಾಗೂ ತಾಂತ್ರಿಕ ಮಂಜೂರಾತಿ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕೆ ಮಂಡಿಸಿದೆ.

ಸ.ಅ (ವಾರ್ಡ್-ನಂ:03)

ಸಹಾಯಕ ಕಾರ್ಯಪಾಲಕ ಅಭಿಯಂತರರು
ಯಲಹಂಕ ಉಪವಿಭಾಗ
ಬಿ.ಬಿ.ಎಂ.ಪಿ, ಬೆಂಗಳೂರು-106

ಪಂಕ್ತಿಯ ಸಂಖ್ಯೆ	ಟಪ್ಪಣಿಗಳು ಮತ್ತು ಆಜ್ಞೆಗಳು

ಪುಟದ ಸಂಖ್ಯೆ .....
ಕಡತದ ಸಂಖ್ಯೆ .....

4)

ಕಾರ್ಯಪಾಲಕ ಅಭಿಯಂತರರು [ಯ.ವಿ]

ಕಂಡಿಕೆ(1) ರಿಂದ (3)ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪ ವಿಭಾಗರವರು ಮಾಡಿರುವ ಪ್ರಸ್ತಾವನೆಯಂತೆ, 2019-20ನೇ ಸಾಲಿನ (POW Works) ವಾರ್ಷಿಕ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3726 ಅನುದಾನದಡಿ ಮಂಜೂರಾಗಿರುವ ರೂ.25.00ಲಕ್ಷಗಳ ಕಾಮಗಾರಿಯನ್ನು ಯಲಹಂಕ ಉಪನಗರ ಉಪ ವಿಭಾಗದ ವಾರ್ಡ್ ನಂ:03ರ ವ್ಯಾಪ್ತಿಯ ಚಿಕ್ಕದಿನ್ನೆಯಿಂದ ತಿರುಮಲನಗರದವರೆಗೆ ಅಡ್ಡರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಕೈಗೊಳ್ಳಲು 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ಎಸ್.ಆರ್. ದರಪಟ್ಟಿಯನ್ನು ಅನುಸರಿಸಿ ರೂ.25.00ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು ಸದರಿ ಅಂದಾಜುಪಟ್ಟಿಗೆ ಈಗಾಗಲೇ ಕಾಮಗಾರಿ ಸಂಕೇತ ದೊರೆತ್ತಿದ್ದು, ಮಾನ್ಯ ಆಯುಕ್ತರವರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ:ಬಿ12(1)ಪಿ.ಆರ್/394/2019-20 ದಿನಾಂಕ:25-9-2019 ರಂತೆ ನೀಡಿರುವ ಅಧಿಕಾರದನ್ವಯ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿ ಕಡತವನ್ನು ಸಲ್ಲಿಸಿದೆ.

ಕಾ.ಪಾ.ಅ(ಯ.ವಿ)

5)

ಮುಖ್ಯ ಅಭಿಯಂತರರು (ಯಲಹಂಕ ವಲಯ)

ಕಂಡಿಕೆ 1 ರಿಂದ 04 ರವರೆಗಿನ ವರದಿಯನ್ನು ತಮ್ಮ ಅವಗಾಹನೆಗ ಸಲ್ಲಿಸಿದೆ. Improvements to cross roads Chikkadinne to Tirumalanagara in ward no-03 ಕಾಮಗಾರಿಯನ್ನು ನಿರ್ವಹಿಸಲು ರೂ25.00 ಲಕ್ಷಗಳಿಗೆ 2019-20ನೇ ಸಾಲಿನ ಪಿ-3726ರ ಅಡಿಯಲ್ಲಿ ಜಾಬ್ ಸಂಕೇತ:003-20-000255 ದೊರೆತಿದ್ದು, ಕಾರ್ಯಪಾಲಕ ಅಭಿಯಂತರರು (ಯಲಹಂಕ) ರವರು ಪ್ರಸ್ತಾಪಿತ ಕಾಮಗಾರಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಕೋರಿ ಕಡತ ಸಲ್ಲಿಸಿರುತ್ತಾರೆ.

6)

ಸದರಿ ಕಾಮಗಾರಿಯನ್ನು ನಗರೋತ್ಥಾನ ಯೋಜನೆ ಅಡಿಯಲ್ಲಿ ಅಥವಾ ಯಾವುದೇ ಲೆಕ್ಕಶೀರ್ಷಿಕೆ ಅಡಿಯಲ್ಲಿ ಕೈಗೊಂಡಿರದ ಬಗ್ಗೆ ಪರಿಶೀಲಿಸಿಕೊಂಡು Overlap ಆಗದಂತೆ ಹಾಗೂ ದಿನಾಂಕ:13-12-2019ರ ಮಾನ್ಯ ಆಯುಕ್ತರು ರವರ ಆದೇಶದನ್ವಯ ಅಂದಾಜು ಪಟ್ಟಿಯಲ್ಲಿ ಅಗತ್ಯ ಅಂಶಗಳನ್ನು ಅಳವಡಿಸಿಕೊಂಡು ಸೂಕ್ತ ಕ್ರಮವಹಿಸಿ, ಪ್ರಸ್ತಾಪಿತ ಕಾಮಗಾರಿಗಳನ್ನು ನಿಮಯಾನುಸಾರ ಅನುಷ್ಠಾನಗೊಳಿಸಲು ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ ರವರಿಗೆ ಸೂಚಿಸಲಾಗಿದ್ದು, ಮಾನ್ಯ ಆಯುಕ್ತರು ರವರ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ ಬಿ12(1)ಪಿ.ಆರ್/394/201-20,ದಿನಾಂಕ:25-09-2019ರಂತೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ನೀಡುವ ಸಂಬಂಧ ತಮ್ಮ ಮುಂದಿನ ಆದೇಶಕ್ಕಾಗಿ ಕೋರಿ ಮಂಡಿಸಿದೆ.

(೭) ಮು. ಪ (ಯುವ)

ಮಂಡಿಸಿದೆ.

ವಿಷಯ:– Improvements to cross roads at chikkadinne to Tirumalanagara in ward no - 03.ಎಂಬ ಕಾಮಗಾರಿಯ ಟೆಂಡರ್ ಮೌಲ್ಯಮಾಪನದ ಬಗ್ಗೆ.

ಉಲ್ಲೇಖ:

1. ಕಾಮಗಾರಿ ಟೆಂಡರ್ ಪ್ರಕಟಣೆ ಸಂಖ್ಯೆ: BBMP/EE/YNK.D/ E-PMT/ 01/2020-21 dated: 02-05-2020.

* * * * *

(೮) ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ಮೂಲಭೂತ ಸೌಕಾರ್ಯಗಳ ಅಭಿವೃದ್ದಿಗಾಗಿ 2019–20ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್ ನಂ–03ರ ವ್ಯಾಪ್ತಿಯಲ್ಲಿ ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಂಡು ನಿರ್ವಹಿಸಲು ಈ ಕೆಳಕಂಡ ಕಾಮಗಾರಿಗೆ ಜಾಬ್ ಸಂಖ್ಯೆ 003–20–000255 ರಂತೆ ದೊರೆತಿರುತ್ತದೆ. ವಿವರ ಈ ಕೆಳಕಂಡಂತಿದೆ.

Sl No	Name of work	Estimate cost Rs in Lakhs
01	Improvements to cross roads at chikkadinne to Tirumalanagara in ward no -03.	25.00
	Total	25.00

(೯) ಈ ಮೇಲ್ಕಂಡ ಕಾಮಗಾರಿಗೆ 2018–19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಗಳನ್ವಯ ಹಾಗೂ ಪರಿಷ್ಕೃತ ದರಗಳನ್ವಯ ರೂ.25.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಸದರಿ ಅಂದಾಜು ಪಟ್ಟಿಗೆ ಮುಖ್ಯ ಅಭಿಯಂತರರು ಯಲಹಂಕ ವಲಯರವರು ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಹಾಗೂ ಕರಡು ಟೆಂಡರ್ ಷೆಡ್ಯೂಲ್‌ಗೆ ಅನುಮೋದನೆ ನೀಡಿರುತ್ತಾರೆ.

ಈ ಮೇಲ್ಕಂಡ ಕಾಮಗಾರಿಗೆ ಸಂಬಂದಿಸಿದಂತೆ ಉಲ್ಲೇಖ (1) ರಂತೆ ದಿನಾಂಕ: 31–01–2020 ರಂದು KTPP.Act Standard Tender Document ಅನುಸಾರ E-Procurement ಮುಖಾಂತರ ಟೆಂಡರ್ ಕರೆದಿದ್ದು, ಸದರಿ ಟೆಂಡರ್ ಪ್ರಕಟಣೆಯನ್ನು ಸಾರ್ವಜನಿಕ ಸಂಪರ್ಕಾಧಿಕಾರಿಗಳ ಮುಖಾಂತರ ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ದಿನಾಂಕ: 3–5–2020 ರಂದು ಪ್ರಕಟಿಸಲಾಗಿರುತ್ತದೆ.

ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡತಿರುತ್ತದೆ.

ಕ್ರ.ಸಂ	ಅಂಶಗಳು	ವಿವರಗಳು
1	ಕೆಲಸದ ಹೆಸರು	Improvements to cross roads at chikkadinne to Tirumalanagara in ward no -03.
2	ಅಂದಾಜು ಮೊತ್ತ	ರೂ. 25.00 ಲಕ್ಷಗಳು

Thirumala Nagara 4-03

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

3	ಇಂಡೆಂಟ್ ನಂ	BBMP/2020-21 / OW/ Work_ INDENT 41500
3	ಅನುದಾನದ ಯೋಜನೆ ಹೆಸರು	2019–20ನೇ ಸಾಲಿನ ಆಯವ್ಯಯ
4	ಲೆಕ್ಕಶೀರ್ಷಿಕೆ	ಪಿ– 3726
5	ಆಡಳಿತಾತ್ಮಕ ಅನುಮೋದನೆ	ಮುಖ್ಯ ಅಭಿಯಂತರರು ಯಲಹಂಕ ವಲಯರವರಿಂದ ಪಡೆಯಲಾಗಿದೆ.
6	ತಾಂತ್ರಿಕ ಮಂಜೂರಾತಿ ಮೊತ್ತ	ರೂ. 25.00 ಲಕ್ಷಗಳು
7	ತಾಂತ್ರಿಕ ಮಂಜೂರಾತಿ ಸಂಖ್ಯೆ	ಸಂಖ್ಯೆ ಬ್ಯಪಂ.ಮ.ಪಾ/ಮು.ಅ/ ತಾ.ಮಂ/ ಯ.ವ./ 346 /2020–21 ದಿನಾಂಕ 27–3–2020.
8	ಟೆಂಡರ್‌ಗೆ ಇಟ್ಟ ಮೊತ್ತ	ರೂ. 22,31,650.08
9	ಅನ್ ಲೈನ್ ಇ–ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ.	21-05-2020 upto 16.00 hrs
10	ಅನ್ ಲೈನ್ ಇ–ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ	22-05-2020 after 16.00 hrs

(10)

ಮೇಲ್ಕಂಡ ಟೆಂಡರ್ ಪ್ರಕಟಣೆಗೆ ಸಂಬಂದಿಸಿದಂತೆ ದಿನಾಂಕ: 22–05–2020 ರಂದು ಟೆಂಡರ್‌ಅನ್ನು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಇಬ್ಬರು ಜನ ಗುತ್ತಿಗೆದಾರರು ಬಾಗವಹಿಸಿದ್ದು, ಗುತ್ತಿಗೆದಾರರ ವಿವರಗಳು ಈ ಕೆಳಕಂಡಂತಿರುತ್ತದೆ.

1. Sri B R Mohan
2. Sri Anjan Kumar Y A

ಮೇಲ್ಕಂಡ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಿದ್ದು, ಇಬ್ಬರು ಗುತ್ತಿಗೆದಾರರು ಒಟ್ಟು ಇ.ಎಂ.ಡಿ ಮೊತ್ತ ರೂ. 25,000.00 ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪಾವತಿಸಿರುತ್ತಾರೆ. ಅದರಂತೆ ಮೇಲ್ಕಂಡ ಇಬ್ಬರು ಬಿಡ್ಡುದಾರರ ನಮೂದಿಸಿರುವ ದರಗಳ ವಿವರಗಳು ಈ ಕೆಳಕಂಡಂತಿರುತ್ತದೆ.

(11)

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟ ಮೊತ್ತ 2018–19 ರ ಅನುಮೋದಿತ ದರಗಳಿಗೆ ಪೋಲಿಸಿದಾಗ.	ಟೆಂಡರ್ ಗಿಟ್ಟ ಮೊತ್ತ 3–1–2020ರ ಪರಿಷ್ಕೃತ ದರಗಳಿಗೆ ಪೋಲಿಸಿದಾಗ.	ಗುತ್ತಿಗೆದಾರರು ನಮೂದಿಸಿರುವ ದರಗಳು	2018–19ನೇ ಸಾಲಿನ ಎಸ್.ಆರ್ ದರಗಳಿಗೆ ಪೋಲಿಸಿದಾಗ ಶೇಕಡವಾರು	ದಿನಾಂಕ: 3–1–2020ರ ಪರಿಷ್ಕೃತ ದರಗಳಿಗೆ ಪೋಲಿಸಿದಾಗ ಶೇಕಡ	ಪರಾ
01	Sri B R Mohan	22,31,650.08	22,31,650.08	24,45,493.63	(+)9.58%	(+)9.58%	
02	Sri Anjan kumar Y A			24,77,527.81	(+)11.01%	(+)11.01%	

ಮೇಲ್ಕಂಡ ಇಬ್ಬರು ಗುತ್ತಿಗೆದಾರರು ಸಲ್ಲಿಸಿರುವ ಆರ್ಥಿಕ ಬಿಡ್‌ಅನ್ನು ಪರಿಶೀಲಿಸಲಾಗಿ Sri B R Mohan ರವರು ನಮೂದಿಸಿರುವ ರೂ 24,45,493.63 ಗಳು ಅತಿ ಕಡಿಮೆ ದರಗಳಾಗಿರುತ್ತದೆ.

ಟಿಪ್ಪಣಿಗಳು ಮತ್ತು ಆಜ್ಞೆಗಳು

ಮೇಲ್ಕಂಡ ಗುತ್ತಿಗೆದಾರರು ಸಲ್ಲಿಸಿರುವ ಆರ್ಥಿಕ ಬಿಡ್‌ಅನ್ನು ಪರಿಶೀಲಿಸಲಾಗಿ Sri B R Mohan ರವರು ನಮೂದಿಸಿರುವ ರೂ. 24,45,493.63ಗಳು ಅತಿ ಕಡಿಮೆ ದರಗಳಾಗಿದ್ದು, ಅನುಮೋದಿತ ಅಂದಾಜು ಪಟ್ಟಿಯ 2018–19 ಸಾಲಿನ ದರಗಳಿಗೆ ಹಾಗೂ ದಿನಾಂಕ: 03–01–2020ರಂತೆ ಪರಿಷ್ಕೃತ ದರಪಟ್ಟಿಗೆ ತುಲನೆ ಮಾಡಿದಾಗ ಶೇಕಡ (+)9.58% ರಷ್ಟು ಕಡಿಮೆ ದರಗಳನ್ನು ನಮೂದಿಸಿ ಅರ್ಹ ಗುತ್ತಿಗೆದಾರರಾಗಿರುತ್ತಾರೆ.

ಮುಂದುವರೆದು ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ Sri B R Mohan ರವರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ. ಸದರಿಯವರು ಮೇಲ್ಕಂಡ ಕಾಮಗಾರಿಗೆ ರೂ. 24,45,493.63ಗಳನ್ನು ನಮೂದಿಸಿದ್ದು 2018–19ನೇ ಸಾಲಿನ ಅನುಮೋದಿತ ದರಗಳಿಗಿಂತ ಶೇಕಡ (+)9.58% ಹೆಚ್ಚುದರ ನಮೂದಿಸಿರುತ್ತಾರೆ. ದರ ಸಂದಾನ ನಡೆಸಲಾಗಿ ಸದರಿ ಗುತ್ತಿಗೆದಾರರು 2018–19 ನೇ ಸಾಲಿನ ಅನುಮೋದಿತ ದರಗಳಿಗೆ ಶೇಕಡ(+)4.50% ಹೆಚ್ಚು ದರಗಳಿಗೆ ಕಾರ್ಯನಿರ್ವಹಿಸಲು ಒಪ್ಪಿರುವುದರಿಂದ ರೂ.23,32,074/–ಗಳಿಗೆ ಅನುಮೋದನೆ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

ಮುಖ್ಯ ಅಭಿಯಂತರರು (ಯಲಹಂಕ ವಲಯ)

ಕಂಡಿಕೆ 11ರಲ್ಲಿ ವಿವರಿಸಿರುವಂತೆ ಪ್ರಸ್ತಾಪಿತ ಕಾಮಗಾರಿಯ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಶ್ರೀ.ಬಿ.ಆರ್.ಮೋಹನ್ ರವರು ಎಲ್–1 ಬಿಡ್‌ದಾರರಾಗಿದ್ದು, ಸದರಿಯವರು ನಮೂದಿಸಿರುವ ದರ ರೂ 24,45,493.63/– ಗಳಾಗಿದ್ದು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ9.58 ರಷ್ಟು ಹೆಚ್ಚುವರಿಯಾಗಿರುತ್ತದೆ. ಎಲ್–1 ಬಿಡ್‌ದಾರರೊಂದಿಗೆ ದರ ಸಂದಾನ ನಡೆಸಲಾಗಿ ಸದರಿಯವರು ರೂ 23,32,074/–ಗಳಿಗೆ ಶೇ 4.50% ರಷ್ಟು ಹೆಚ್ಚುವರಿ ದರಗಳಿಗೆ ಕಾಮಗಾರಿ ನಿರ್ವಹಿಸಲು ಒಪ್ಪಿದ್ದು, ಮಾನ್ಯ ಆಯುಕ್ತರ ಅಧಿಕಾರ ಪ್ರತ್ಯಾಯೋಜನೆ ದಿನಾಂಕ:25–09–2019 ರಂತೆ ಟೆಂಡರ್ ಅನುಮೋದಿಸುವ ಅಧಿಕಾರವು ಮುಖ್ಯ ಅಭಿಯಂತರರ ವ್ಯಾಪ್ತಿಗೆ ಬರುತ್ತದೆ ಆದರೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಿಎಸ್‌ಆರ್ ವ್ಯಾಲ್ಯೂ+9.58% ನಮೂದಾಗಿರುವುದರಿಂದ ಇ–ಪೋರ್ಟಲ್‌ನಲ್ಲಿ ಟೆಂಡರ್ ಅನುಮೋದನೆ ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿ ಟೆಂಡರ್ ಅನುಮೋದನೆಗಾಗಿ ಮಾನ್ಯ ವಲಯ ಆಯುಕ್ತರಿಗೆ ಸಲ್ಲಿಸಲು.

ಪೈ.ತಿ.ನೋ

ವಿಷಯ :

ಪುಟದ ಸಂಖ್ಯೆ ..... -06-

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
(16)	ಮುಖ್ಯ ಅಭಿಯಂತರರು (ಪ)
	ಕಂಡಿಕೆ 15ರಲ್ಲಿ ಕಾರ್ಯಪಾಲಕ ಅಭಿಯಂತರರು ವಿವರಿಸಿರುವಂತೆ ಶ್ರೀ.ಬಿ.ಆರ್.ಮೋಹನ್ ರವರು ಎಲ್-1 ಬಿಡ್‌ದಾರರಾಗಿದ್ದು, ಸದರಿಯವರು ನಮೂದಿಸಿರುವ ದರ ರೂ.24,45,493.63/- ಗಳಾಗಿದ್ದು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ+9.58 ರಷ್ಟು ಹೆಚ್ಚುವರಿಯಾಗಿರುತ್ತದೆ. ಎಲ್-1 ಬಿಡ್‌ದಾರರೊಂದಿಗೆ ದರ ಸಂದಾನ ನಡೆಸಲಾಗಿ ಸದರಿಯವರು ರೂ 23,32,074/-ಗಳಿಗೆ ಶೇ 4.50% ರಷ್ಟು ಹೆಚ್ಚುವರಿ ದರಗಳಿಗೆ ಕಾಮಗಾರಿ ನಿರ್ವಹಿಸಲು ಒಪ್ಪಿದ್ದು, ಮಾನ್ಯ ಆಯುಕ್ತರ ಅಧಿಕಾರ ಪ್ರತ್ಯಾಯೋಜನೆ ದಿನಾಂಕ:25-09-2019 ರಂತೆ ಟೆಂಡರ್ ಅನುಮೋದಿಸುವ ಅಧಿಕಾರವು ಮುಖ್ಯ ಅಭಿಯಂತರರ ವ್ಯಾಪ್ತಿಗೆ ಬರುತ್ತದೆ ಆದರೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಿಎಸ್‌ಆರ್ ವ್ಯಾಲ್ಯೂ+9.58 ನಮೂದಾಗಿರುವುದರಿಂದ ಇ-ಪೋರ್ಟಲ್‌ನಲ್ಲಿ ಟೆಂಡರ್ ಅನುಮೋದನೆ ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿ ಟೆಂಡರ್ ಅನುಮೋದನೆಗಾಗಿ ಮಾನ್ಯ ವಲಯ ಆಯುಕ್ತರಿಗೆ ಸಲ್ಲಿಸಲು ತಮ್ಮ ಮುಂದಿನ ಆದೇಶಕ್ಕಾಗಿ ಸಲ್ಲಿಸಿದೆ.
17	ಮು.ಲ(ಯವ)
	ಕಂಡಿಕೆ 16ರಲ್ಲಿ ವಿವರಿಸಿರುವಂತೆ ಪ್ರಸ್ತಾಪಿತ ಕಾಮಗಾರಿಯ ಎಲ್-1 ಬಿಡ್‌ದಾರರು ನಮೂದಿಸಿರುವ ದರ ರೂ.24,45,493.63 ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ+9.58% ಹೆಚ್ಚುವರಿಯಾಗಿದ್ದು ಕಾರ್ಯಪಾಲಕ ಅಭಿಯಂತರರು ದರ ಸಂದಾನ ನಡೆಸಿದಾಗ ಗುತ್ತಿಗೆದಾರರು ರೂ.23,32,074.00ಗಳಿಗೆ ಶೇ4.5%ರಷ್ಟು ಹೆಚ್ಚುವರಿದರಗಳಿಗೆ ಕಾಮಗಾರಿ ನಿರ್ವಹಿಸುವುದಾಗಿ ಒಪ್ಪಿದ್ದು, ಮಾನ್ಯ ಅಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ದಿನಾಂಕ:25-09-2019 ರಂತೆ ಟೆಂಡರ್ ಅನುಮೋದಿಸಲಾಗಿದ್ದು, ಟೆಂಡರ್ ಪ್ರೀಮಿಯಂ ಶೇ5.ಕಿಂತ ಹೆಚ್ಚುವರಿ ಇರುವುದರಿಂದ ಇ ಪೋರ್ಟಲ್‌ನಲ್ಲಿ ಟೆಂಡರ್ ಅನುಮೋದಿಸಲು ಸಾಧ್ಯವಾಗಿರುವುದಿಲ್ಲ ಈ ಹಿನ್ನೆಲೆಯಲ್ಲಿ ಇ ಪೋರ್ಟಲ್ ಮುಖಾಂತರ ಟೆಂಡರ್ ಅನುಮೋದನೆ ಕೋರಿ ಕಡತವನ್ನು ಮಂಡಿಸಿದೆ.
18	ಹೆಸ್ಕ ವಲಯ ಆಯುಕ್ತರ (ಮಾ.ಪಿ)
	ಮುಖ್ಯ ಅಭಿಯಂತರರು ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
	2019-20ನೇ ಸಾಲಿನ ಆಯವ್ಯಯದ **(POW Works)** ಲೆಕ್ಕಶೀರ್ಷಿಕೆ ಪಿ-3726ರ ಅಡಿಯಲ್ಲಿ ಅನುಮೋದನೆಯಾಗಿರುವ **"Improvements to Cross Roads at Chikkadinne to Tirumalanagara in ward no-03"**(ಕಾಮಗಾರಿ ಸಂಖ್ಯೆ ಪ್ರಮಾಣ ಪತ್ರ: 003-20-000225) ರೂ.25.00 ಲಕ್ಷಗಳ ಮೊತ್ತದ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಪಡೆದುಕೊಂಡು ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಇಬ್ಬರು ಬಿಡ್ದುದಾರರು ಕ್ರಮವಾಗಿ 1)Sri.B.R.Mohan 2)Sri.Anjana kumar Y.A ರವರು ಭಾಗವಹಿಸಿರುತ್ತಾರೆ.

ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಂಖ್ಯೆಯ ಸಂಖ್ಯೆ

19) ಟೆಂಡರ್ ನಿಯಮಗಳನ್ವಯ ಇಬ್ಬರು ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ. ಆರ್ಥಿಕ ಬಿಡ್‌ನ್ನು ದಿನಾಂಕ:29/05/2020ರಂದು ತೆರೆಯಲಾಗಿದ್ದು. ಕಂಡಿಕೆ(11)ರಲ್ಲಿ ಮೇಲ್ಕಂಡ ಅರ್ಹ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು ವಿವರಿಸಲಾಗಿರುತ್ತದೆ.

20) ಕನಿಷ್ಠ ದರ ನಮೂದಿಸಿರುವ ಎಲ್-1 ಗುತ್ತಿಗೆದಾರರಾದ 1) **Sri. B.R.Mohan** ರವರು ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತವಾದ ರೂ.24,45,493.63/-ಗಳನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ 2018-19ನೇ ಸಾಲಿನ ಎಸ್.ಆರ್.ದರಗಳಿಗೆ ಹೋಲಿಸಿದಾಗ ಶೇ,+9.58%ರಷ್ಟು ಹೆಚ್ಚುವರಿ ದರಗಳಾಗಿರುತ್ತದೆ.

21) ಮುಂದುವರೆದು, ಕಾರ್ಯಪಾಲಕ ಅಭಿಯಂತರರು(ಯಲಹಂಕ)ರವರು ದರ ಸಂದಾನ ನಡೆಸಿದ ನಂತರ ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ,23,32,074.00/-ಗಳನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ 2018-19ನೇ ಸಾಲಿನ ಎಸ್.ಆರ್.ದರಗಳಿಗೆ ಹೋಲಿಸಿದಾಗ ಶೇ,+4.50%ರಷ್ಟು ಹೆಚ್ಚುವರಿ ದರಗಳಾಗಿದ್ದು,

22) ಮೇಲ್ಕಂಡ ಟೆಂಡರ್ ಪ್ರಕ್ರಿಯೆಯನ್ನು ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ನಡವಳಿ ಆದೇಶ ಸಂಖ್ಯೆ: ಬಿ12(1)/ಪಿಆರ್/394/2019-20 ದಿ:25/09/2019ರನ್ವಯ ವಲಯ ಆಯುಕ್ತರವರ ಅನುಮೋದನೆ ಕೋರಿರುವುದನ್ನು ಪರಿಗಣಿಸಿ ಕಂಡಿಕೆ(10)ರಿಂದ(17)ರ ವರೆಗಿನ ಕಾರ್ಯಪಾಲಕ ಅಭಿಯಂತರರು(ಯಲಹಂಕ) ಹಾಗೂ ಮುಖ್ಯ ಅಭಿಯಂತರರು(ಯಲಹಂಕ)ವಲಯ ರವರ ಶಿಫಾರಸ್ಸಿನಂತೆ, ಪ್ರಸ್ತಾಪಿತ ಕಾಮಗಾರಿಯ ಟೆಂಡರ್ ಪ್ರಕ್ರಿಯೆಗೆ ಅನುಮೋದನೆ ನೀಡಲಾಗಿದೆ.

ವಿಶೇಷ ಆಯುಕ್ತರು (ಆಡಳಿತ) ಹಾಗೂ
ವಲಯ ಆಯುಕ್ತರು (ಯಲಹಂಕ)/(ದಾಸರಹಳ್ಳಿ)

23) ಮುಖ್ಯ ಅಭಿಯಂತರರು(ಯಲಹಂಕ)

E-E (Yelahanka)

ಪ್ರತಿಸೋ